# ಪ್ರಯೋಗ ದೋಣಿಯ ಪಯಣಿಗ

ಕಂಠೀರವ ಸ್ಟುಡಿಯೊ ಆವರಣದ ಹುಲ್ಲುಕಡ್ಡಿಗಳೆಲ್ಲಾ ಆ ಬುಲೆಟ್ ಸ್ಟಾರ್ಟ್ ಆದ ಸದ್ದಿಗೆ ಅಲ್ಲಾಡಿದವು. 'ದುನಿಯಾ' ಸಿನಿಮಾ ಯಶಸ್ಸಿನ ನೆನಪು ಆಗಿನ್ನೂ ಮಾಸಿರಲಿಲ್ಲ. ಅದರಲ್ಲಿ ಎಸಿಪಿ ಪಾತ್ರ ನಿರ್ವಹಿಸಿದ್ದ ನಟನಿಗೆ ಒಂದಿಷ್ಟು ಅವಕಾಶಗಳು ಸಿಗತೊಡಗಿದ್ದವು. ತಾನು ಭೂಮಿ ಮೇಲೆಯೇ ಇರಬೇಕು ಎಂಬ ತತ್ವ ಪಾಲಿಸಲೆಂದು ಇಷ್ಟಪಟ್ಟು ಕೊಂಡುಕೊಂಡಿದ್ದ ಬುಲೆಟ್ ಮೇಲೆಯೇ ಅವರು ಓಡಾಡುತ್ತಿದ್ದರು. ಕಾರಿನ ಹಂಗು ಅವರಿಗಿನ್ನೂ ಇರಲಿಲ್ಲ.

ಕೆಲವು ವರ್ಷಗಳ ನಂತರ ತಮ್ಮ ಉಳಿತಾಯದ ಹಣವನ್ನು ಸಿನಿಮಾ ಮೇಲೆ ವಿನಿಯೋಗಿಸಿದ ಆ ನಟ, ಇನ್ನಷ್ಟು ಸ್ನೇಹಿತರನ್ನೂ ಆ ಸಾಹಸಕ್ಕೆ ಎಳೆದುಕೊಂಡಿದ್ದರು. ಒಂದು ಕಾಲದಲ್ಲಿ ಕಾಲೇಜು ಹೈಕಳಿಗೆ ಪಾಠ ಮಾಡಿದ್ದ ಗತ್ತನ್ನು ಉಳಿಸಿಕೊಂಡಿದ್ದ ನಟನಿಗೆ ಒಳ್ಳೊಳ್ಳೆಯ ಸಿನಿಮಾಗಳನ್ನು ತಯಾರಿಸಬೇಕು ಎನ್ನುವ ಮಹತ್ವಾಕಾಂಕ್ಷೆ. ಅದಕ್ಕೆ ಹಣ ಹೊಂದಿಸಲು ತಂತಾವೇ ದಾರಿಗಳು ತೆರೆದುಕೊಂಡವು. ತಮಿಳಿನಲ್ಲೂ ಸಿನಿಮಾ ಅವಕಾಶಗಳು ಸಿಕ್ಕವು.

ಒಂದು ಕಾಲನ್ನು ತಮಿಳು ನೆಲದಲ್ಲೂ ಇನ್ನೊಂದು ಕಾಲನ್ನು ಗಾಂಧೀನಗರದಲ್ಲಿ ಇಟ್ಟುಕೊಂಡು ಏಗಲು ನಟ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಇಲ್ಲಿ ಅವರು ಕ್ರೀಡಾವಸ್ತುವೊಂದನ್ನು ಇಟ್ಟುಕೊಂಡು ಮಾಡಲು ಹೊರಟಿದ್ದ ಸಿನಿಮಾ ಅರ್ಧ ಚಿತ್ರೀಕರಣ ಮುಗಿಯುವ ಹೊತ್ತಿಗೆ ಅಪಸ್ವರಗಳು ಎದ್ದವು. ಅದನ್ನು ತೆರೆಕಾಣಿಸುವ ಹೊತ್ತಿಗಂತೂ 'ಉಸ್ಸಪ್ಪಾ ಉಸ್' ಎಂದರು.

ಒಂದು ಕಡೆ ಆರ್ಥಿಕ ಮುಗ್ಗಟ್ಟು, ಇನ್ನೊಂದು ಕಡೆ ಸಿನಿಮಾ ಪಾತ್ರಗಳ ಆಯ್ಕೆಯ ಇಕ್ಕಟ್ಟು ಎರಡೂ ಅವರಿಗೆ ಒಟ್ಟಿಗೆ ಬಂದೆರಗಿದವು. ಕಮರ್ಷಿಯಲ್ ಚಿತ್ರಗಳನ್ನು ಒಂದು ಕಡೆ ಒಪ್ಪಿಕೊಳ್ಳುತ್ತಾ, ಇನ್ನೊಂದು ಕಡೆ ಹಳಬರ ಪ್ರೀತಿಗೆ ಕಟ್ಟುಬಿದ್ದು 'ಬ್ರಿಜ್ ಸಿನಿಮಾ'ಗಳ ಸೇತುವೆ ಮೇಲೂ ನಡೆದರು. 'ಯಾರ್ಯಾರೋ ಬಂದು ನನ್ನ ಕೂದಲನ್ನು ಕಿತ್ತುಕೊಂಡು ಹೋದರು. ಈಗ ಉಳಿದಿರೋದಿಷ್ಟು. ನೀನೂ ಕಿತ್ತುಕೊಂಡು ತಾಯತಾ ಕಟ್ಟಿಸಿಕೋ' ಎಂಬ ಅವರೇ ನಾಯಕರಾದ ಆ್ಯಕ್ಷನ್ ಸಿನಿಮಾದ ಸಂಭಾಷಣೆಗೆ ಅನೇಕರು ಚಪ್ಪಾಳೆ ಹೊಡೆದರು. ಸಂಭಾಷಣೆ ಹೇಳುವ ಅವರ ಶೈಲಿಗೆ ಅವರದ್ದೇ ಆದ ಖದರ್ ಇದೆ. ಆ ಸಿನಿಮಾ ಬಂದಾಗ ಜನಪ್ರಿಯ ನಾಯಕರಿಗೆ ಇವರು ಪರ್ಯಾಯ ನಾಯಕ ಆಗಬಹುದು ಎಂದೂ ಕೆಲವರು ಶಹಬ್ಬಾಸ್‌ಗಿರಿ ಕೊಟ್ಟರು. ಹಾಗೇನೂ ಆಗಲಿಲ್ಲ ಎನ್ನುವುದು ಬೇರೆ ಮಾತು.

ತಮಿಳಿನ ದೋಣಿ ಮೇಲೆ ಅವರು ಇಟ್ಟಿದ್ದ ಕಾಲನ್ನು ಈಗ ಬಹುತೇಕ ತೆಗೆದಿದ್ದಾರೆ. ಗಾಂಧಿನಗರದಲ್ಲಿ ಒಂದಿಷ್ಟು ಪ್ರಯೋಗಮುಖಿ ಸ್ನೇಹಿತರು ಆ್ಯಕ್ಷನ್, ಕಟ್ ಹೇಳಲು ಮುಂದಾದರೆ ಅದಕ್ಕೆ ಸಾಥ್ ಕೊಡುವಷ್ಟು ಔದಾರ್ಯ ಉಳಿಸಿಕೊಂಡಿದ್ದಾರೆ. ಆಗೀಗ ತಮ್ಮ ಹಳೆಯ ಬುಲೆಟ್ ಮೇಲಿನ ದೂಳು ಕೊಡವುತ್ತಾ, ಜೊತೆಗೆ ಹಳೆಯ ನೆನಪನ್ನು ಮೆಲುಕುಹಾಕುವಷ್ಟು ಸಹೃದಯಿ.

ನಾಯಕ ಎಂದರೆ ತಲೆತುಂಬಾ ಕೂದಲು ಇರಬೇಕು ಎನ್ನುವ ನಂಬಿಕೆಗೆ ಅಪವಾದವಾಗಿ ಕಾಣಿಸುವ ಇಂಥ ನಟರು ಅಲ್ಲಲ್ಲಿ ಉಳಿದಿರುವುದು ಗಮನಾರ್ಹ ಸಂಗತಿಯಂತೂ ಹೌದು.

● ವಿಶಾಖ ಎನ್.

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68